**DAB/DSB – 010**

**ದ್ವಿತೀಯ ಬಿ.ಎ./ಬಿ.ಎಸ್ಸಿ. ಪದವಿ ಪರೀಕ್ಷೆ, ಸಪ್ಟೆಂಬರ್/ಅಕ್ಟೋಬರ್ 2012**

**ಅಂಚೆ ಮತ್ತು ತೆರಪಿನ ಶಿಕ್ಷಣ**

**Directorate of Distance Education**

**ಕನ್ನಡ ಭಾಷಾ ಪತ್ರಿಕೆ - ೨**

**(ಪ್ರಾಚೀನ ಕನ್ನಡ ಕಾವ್ಯ - ೨, ತುಘಲಕ್, ಆಯ್ದ ಸಣ್ಣ ಕತೆಗಳು, ದೇವರು)**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70/80

1. ಅ) **ಒಂದರ** ಭಾವಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **(1×4=4)**

೧) ಅರುಣ ಜಲದಾಜ್ಯದಲಿ ಬಂಬಲು
ಗರುಳ ಚರುವಿನಲೆಲುಬಿನೊಟ್ಟಿಲ
ಬೆರಳ ಸಮಿಧೆಯಲಡಗಿನಖಿಳಾಹುತಿಯ ರಚನೆಯಲಿ
ಶಿರಕಪಾಲದ ಪಾತ್ರೆಗಳ ತಿಲ
ದೊರಳೆಗಳ ಕೇಶೌಘ ದರ್ಭಾಂ
ಕುರದಲಾಹವ ಯಜ್ಞದೀಕ್ಷಿತನಹೆನು ತಾನೆಂದ.

೨) ದೇವರೇ, ನನ್ನ ಕೈ ಬಿಡಬೇಡ, ದೇವರೇ, ನನ್ನ ತೊಗಲಿಗೆ ಬಣ್ಣ ಕೊಟ್ಟ ರಕ್ತದಲ್ಲಿ ನನ್ನದೆಷ್ಟು ಇನ್ನೊಬ್ಬರದೆಷ್ಟು ತಿಳಿಯದೆ ಮರುಳಾಗಿದ್ದೇನೆ. ನಿನ್ನ ಹಾದಿಯಲ್ಲಿ ಹೊರಟ ನಾನು, ಹೀಗೆ ಏತಕ್ಕೆ ಬತ್ತಲೆಯಾಗಿ ಮರುಭೂಮಿಯಲ್ಲಿ ಅಲೆಯಬೇಕು ? ನಿನ್ನಕರುಣೆಯಿಂದ ನನ್ನನ್ನು ಹೊಚ್ಚು ದೇವರೇ. ನಿನ್ನ ಆಸರವನ್ನರಸಿ ಬಂದವನು ಹಂದಿಯಂತೆ ಕೊಳೆಯಲ್ಲಿ ಬಿದ್ದಿದ್ದೇನೆ.

ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **($8\times{}^1/_2=4$)**

ಸೂಟ್, ಸಂಕಲೆ, ಚರಿಗೆ, ತರಕ್ಷು, ಕಾಜಿ, ಕಾಫಿರ, ವಜೀರ, ಶಹರ ಬೇನೆ, ಗೇಹ, ಮುನ್ನೀರ್, ದೀವಟಿಗೆ.

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×2=4)**

ಸುದತ್ತಾಚಾರ್ಯರು, ಶೇಖ ಇಮಾಮುದ್ದೀನ್, ಮಾರಿದತ್ತ, ರತನಸಿಂಹ.

2. **ನಾಲ್ಕಕ್ಕೆ** ಸಂದರ್ಭಸೂಚಿಸಿ ಟಿಪ್ಪಣಿ ಬರೆಯಿರಿ : **(4×3=12)**

೧) ಕಟ್ಟಿದ ಪಟ್ಟಮೆ ಸರವಿಗೆ.

೨) ತಪಕೆ ಬೇಱೆ ಕೋಡೆರಡೊಳವೇ ?

೩) ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

೪) ಮನುಷ್ಯತೆಯ ಗಡಿ ಮೀರಿ ದೇವರಾಗಲಿಕ್ಕೆ ಹವಣಿಸುತ್ತಿದ್ದೀರಿ.

೫) ನನಗೆ ಶಾಂತಿ ಬೇಕಾಗಿದೆ. ರಕ್ತಪಾತ ನಿಲ್ಲಿಸಬೇಕಾಗಿದೆ.

೬) ನೂರಾರು ಕಾಯಿಲೆಗಳ ಹುತ್ತವಾಗಿದೆ ನನ್ನ ರಾಜ್ಯ.

P.T.O.

3. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

೧) ‘ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ’ ಹೇಳಿಕೆಯನ್ನು ಕಾವ್ಯಭಾಗದ ಆಧಾರದಿಂದ ಚರ್ಚಿಸಿ.

೨) ಬಸವಣ್ಣನವರ ವಚನಗಳ ಆಶಯವನ್ನು ಪಠ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×5=5)**

೧) ಕುಲದ ಬಗ್ಗೆ ಕನಕದಾಸರ ನಿಲುವುಗಳೇನು ?

೨) ಜನಪದಗೀತೆಗಳಲ್ಲಿ ವ್ಯಕ್ತವಾಗಿರುವ ತವರಿನ ಮಮತೆ.

4. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

೧) ‘ತುಘಲಕ್’ ಒಂದು ವಿಡಂಬನಾತ್ಮಕ ನಾಟಕ ಹೇಗೆ ? ಚರ್ಚಿಸಿ.

೨) ನಜೀಬ, ಶಿಹಾಬುದ್ದೀನ, ಮಲತಾಯಿ – ಈ ಪಾತ್ರಗಳನ್ನು ಕುರಿತು ಬರೆಯಿರಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×5=5)**

೧) ಅಝೀಝು

೨) ಬರನಿ.

5. **ಒಂದು** ಪ್ರಶ್ನೆಗೆ ಉತ್ತರಿಸಿ : **(1×10=10)**

೧) ಕಾಣಿಯ ಬದುಕಿನ ದುರಂತಕ್ಕೆ ಕಾರಣಗಳೇನು ? ವಿವರಿಸಿ.

೨) ‘ಅಬಚೂರಿನ ಪೋಸ್ಟಾಫೀಸು ಕಥೆಯಲ್ಲಿ ಚಿತ್ರಿತವಾಗಿರುವ ಬೊಬಣ್ಣನ ಬದುಕಿನ ದುರಂತವನ್ನು ಚಿತ್ರಿಸಿ.

6. **ಒಂದು** ಪ್ರಶ್ನೆಗೆ ಉತ್ತರಿಸಿ : **(1×10=10)**

೧) ‘ನಾವು ನಂಬಿರುವ ದೇವರು ವಿಶ್ವ ನಿಯಾಮಕ ದೇವರಲ್ಲ’ – ಈ ಹೇಳಿಕೆಯನ್ನು ಕೃತಿಯ ಹಿನ್ನೆಲೆಯಲ್ಲಿ ಚರ್ಚಿಸಿ.

೨) ದೇವರನ್ನು ಕುರಿತ ಪ್ರಾಚೀನರ ಕಲ್ಪನೆಗಳನ್ನು ವಿವರಿಸಿ.

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ (**80** ಅಂಕಗಳ ಸ್ಕೀಂನವರಿಗೆ **ಕಡ್ಡಾಯ**) : **10**

೧) ದೇವರ ಅಸ್ತಿತ್ವವನ್ನು ವಿಚಾರಶಕ್ತಿ ಮತ್ತು ಅಂತರ ದೃಷ್ಟಿಯಿಂದ ಸಾಧಿಸುವ ರೀತಿ ಹೇಗೆ ? ಚರ್ಚಿಸಿ.

**ಅಥವಾ**

ದೇವರು ಇದ್ದಾನೆಯೋ ? ಅಥವಾ ನಾವು ತಂದುಕೊಂಡ ಭ್ರಮೆಯೋ ? ಚರ್ಚಿಸಿ.

---